ಸರ್ಕಾರದಿಂದ ಬಿಡುಗಡೆಯಾಗಿರುವ ರೂ. 2.00 ಕೋಟಿಗಳ ಮೃದು ಸಾಲದಲ್ಲಿ ಜೂನ್ 2002 ರಿಂದ ಆಗಸ್ಟ್ 2002ರವರೆಗೆ 380 ಕಾರ್ಮಿಕರಿಗೆ ರೂ. 36 ಲಕ್ಷಗಳ ಸಂಬಳ ಪಾವತಿ ಮಾಡಲಾಗಿದೆ. ಉಳಿದ ಇನ್ನೂ 200 ಜನ ಕಾರ್ಮಿಕರಿಗೆ ರೂ. 14.00 ಲಕ್ಷ ಪಾವತಿಸಲು ಬಾಕಿ ಇರುತ್ತದೆ.

ದಲಿತ ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ

3147 (3619) : ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಲಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರಾಜ್ಯಾದ್ಯಂತ ಯಾವ ಯಾವ ಸ್ಥಳಗಳಲ್ಲಿ ದಲಿತ ಕುಟುಂಬಗಳಿಗೆ ಮೇಲ್ಜಾತಿಯವರಿಂದ ಅಥವಾ ಇತರರಿಂದ ಸಾಮಾಜಿಕ ಬಹಿಷ್ಕಾರ ಹಾಕಿರುವ ಘಟನೆಗಳು ಎಷ್ಟು ಜರುಗಿವೆ; ಜಿಲ್ಲಾವಾರು ವಿವರಿಸುವುದು;

ಆ) ಇಂತಹ ಪ್ರಸಂಗಗಳು ಪದೇ ಪದೇ ಮರುಕಳಿಸಲು ಕಾರಣಗಳೇನು;

ಇ) ಸಾಮಾಜಿಕ ಬಹಿಷ್ಕಾರಕ್ಕೊಳಗಾದವರಿಗೆ ಸರ್ಕಾರ ಯಾವ ರಕ್ಷಣೆಯನ್ನು ಒದಗಿಸಿದೆ; ಪರಿಹಾರವನ್ನು ಒದಗಿಸಲಾಗಿದೆಯೇ; ಎಷ್ಟು ಪರಿಹಾರ ನೀಡಿದೆ;

ಈ) ಈ ಘಟನೆಗಳ ಹಿನ್ನೆಲೆಯಲ್ಲಿ ಬಹಿಷ್ಕಾರ ಹಾಕಲು ಕಾರಣರಾದವರನ್ನು ಗುರುತಿಸಲಾಗಿದೆಯೇ; ಅಂತಹವರ ಮೇಲೆ ಯಾವ ಕ್ರಮಗಳನ್ನು ಜರುಗಿಸಲಾಗಿದೆ.

ಉ) ಈ ಪ್ರಕರಣಗಳು ಪುನಃ ನಡೆಯದಿರುವಂತೆ ಶಾಶ್ವತ ಪರಿಹಾರಕ್ಕೆ ಸರ್ಕಾರ ಮುಂದಾಗುವುದೇ; ಯಾವ ಕ್ರಮವನ್ನು ಅನುಸರಿಸುವುದು; ಅದರ ಸ್ವರೂಪಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಒಂದು ಘಟನೆ ಬಾಗಲಕೋಟೆ ಜಿಲ್ಲೆಯ ಇಳಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ನಿಡಸನೂರು ಗ್ರಾಮದಲ್ಲಿ 2001ನೇ ಸಾಲಿನಲ್ಲಿ ಘಟನೆ ಜರುಗಿದೆ.

ಆ) ಪ್ರಕರಣ ಪುನಾರಾವರ್ತನೆಯಾಗಿರುವುದಿಲ್ಲ.

ಇ) ಸಂತ್ರಸ್ಥರಿಗೆ ಪೊಲೀಸ್ ರಕ್ಷಣೆ ಜೊತೆಗೆ ತಲಾ 50,000/– ರಂತೆ 6 ಜನರಿಗೆ ಪರಿಹಾರ ಧನ ಮಂಜೂರು ಮಾಡಲಾಗಿದೆ. ಆರೋಪಿಗಳ ವಿರುದ್ಧ ಕಾನೂನಿನ ಅನುಸಾರ ಕ್ರಮ ಕೈಗೊಂಡು ಪ್ರಕರಣವನ್ನು ಇಳಕಲ್ ಪೊಲೀಸ ಠಾಣೆಯಲ್ಲಿ ದಾಖಲಿಸಿ ಸಂತ್ರಸ್ಥರ ಮನಸ್ಸಿನಲ್ಲಿ ವಿಶ್ವಾಸ ಮೂಡಿಸಲಾಗಿದೆ.

ಈ) ಹೌದು.

ಈ ಘಟನೆಗೆ ಕಾರಣರಾದ 6 ಜನರನ್ನು ಗುರುತಿಸಿ ಅವರ ವಿರುದ್ಧ ಕಲಂ 3(1)(10)(14) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಯಮ 1989ರಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿದೆ ಮತ್ತು ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ.

ಉ) ಮೇಲೆ ತಿಳಿಸಿದಂತೆ ಸಾಮಾಜಿಕ ಬಹಿಷ್ಕಾರ ಘಟನೆಯು ಒಂದು ಮಾತ್ರ ಸಂಭವಿಸಿರುತ್ತದೆ ಮತ್ತು ಸಂಭವಿಸಿರುತ್ತದೆ ಮತ್ತು ಪುನರಾವರ್ತನೆಯಾಗಿರುವುದಿಲ್ಲ. ಆದಕಾರಣ ಈ ಬಗ್ಗೆ ಶಾಶ್ವತ ಪರಿಹಾರದ ಕ್ರಮಗಳು ಸರ್ಕಾರದ ಪರಿಶೀಲನೆಯಲ್ಲಿ ಸದ್ಯಕ್ಕೆ ಇರುವುದಿಲ್ಲ. ಪ್ರಸ್ತುತ ಚಾಲ್ತಿಯಲ್ಲಿರುವ ಕಾನೂನು ಕ್ರಮಗಳೇ ಸಾಕಾಗುತ್ತದೆ.